# IN THE COURT OF THE ADDL. SENIOR CIVIL JUDGE & JMFC., GUBBI

## OS – 210/2023

Witness present and duly sworn on : 15.03.2025.

Cross Examination: by Counsel for Defendants :

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ 50 ವರ್ಷ ವಯಸ್ಸು. ನಾನು ಟ್ರಾಕ್ಟರ್ ಚಲಾಯಿಸುವ ಕೆಲಸ ಮಾಡುತ್ತೇನೆ. ಲಕ್ಷ್ಮಮ್ಮ ಮತ್ತು ಭದ್ರಯ್ಯ ನನ್ನ ಅತ್ತಿಗೆ ಮತ್ತು ಅಣ್ಣ. ಅವರು ಈ ದಾವೆಯನ್ನು ಜಮೀನು ಬರಬೇಕೆಂದು ಸಲ್ಲಿಸಿದ್ದಾರೆ. ಪ್ರತಿವಾದಿಗಳು ಮತ್ತು ನಾನು ಒಂದೇ ಜಾತಿಯವರು ಆದರೆ ಸಂಭಂದಿಕರಲ್ಲ. ದಾವಾ ಆಸ್ತಿಗೆ ಸಂಭಂದಿಸಿದಂತೆ ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಮನೆ ಬರಬೇಕೆಂದು ಗೌರಮ್ಮ ರವರು ಸಲ್ಲಿಸಿದ್ದರು ಎಂದರೆ ಸರಿ. ನನಗೆ ಮತ್ತು ಪ್ರತಿವಾದಿಗಳಿಗೆ ವೈಮನಸ್ಸು ಇದೆ ಎಂದರೆ ಸರಿ. ಗಲಾಟೆ ಆಗಿರುವುದಿಲ್ಲ. 1975 ರಲ್ಲಿ ನಡೆದಿರುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ವಿಚಾರವನ್ನು ನನ್ನ ಅಜ್ಜಿ ಭದ್ರಮ್ಮ ತಿಳಿಸಿದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯು ಹೆರೂರು ಪಾರಂ ನಲ್ಲಿ ಇದೆ. ದಾವಾ ಆಸ್ತಿಯು ಹೆರೂರು ಗ್ರಾಮದಲ್ಲಿ ಇದೆ ಎಂದರೆ ಸದರಿ ಊರನ್ನು ಹೆರೂರು ಮತ್ತು ಹೆರೂರು ಪಾರಂ ಎಂದು ಕರೆಯುತ್ತಾರೆ. ದಾವಾ ಆಸ್ತಿಯು ಸರ್ವೆ ನಂಬರ್ ಗೆ ಒಳಪಡುತ್ತದೆ. ದಾವಾ ಆಸ್ತಿಯ ಖಾತೆಯ ನಂಬರ್ ನನಗೆ ಗೊತ್ತಿಲ್ಲ. ಖರೀದಿ ಮಾಡಿರುವ ಮಾಹಿತಿ ನನಗೆ ಗೊತ್ತಿಲ್ಲ. ರೂ.90 ಕ್ಕೆ ಎರಡು ಗುಂಟೆ ಆಸ್ತಿಯನ್ನು ಖರೀದಿ ಮಾಡಿದರು. ನನ್ನ ಅಣ್ಣ ಅತ್ತಿಗೆ ಹಾಲಿ ಸ್ವತ್ತಿನಲ್ಲಿ ವಾಸ ಇದ್ದಾರೆ. ಅಣ್ಣ ಅತ್ತಿಗೆ ಬೇರೆ ಚಕ್ಕುಬಂದಿಯ ಆಸ್ತಿಯಲ್ಲಿ ಇದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ಗೌರಮ್ಮ ರವರು ದಾವಾ ಸಲ್ಲಿಸಿದ ನಂತರ ಹಕ್ಕು ಖುಲಾಸೆ ಪತ್ರ ಮಾಡಿದ್ದೇನೆಂದರೆ ಸರಿಯಲ್ಲ. ರೂ.5, 000/- ಹಣ ಪಡೆದು ಹಕ್ಕು ಖುಲಾಸೆ ಪತ್ರವನ್ನು ನನ್ನ ಅಣ್ಣನಿಗೆ ಬರೆದಿರುತ್ತೇನೆ. ಯಾವುದೇ ಹಕ್ಕು ಇಲ್ಲದೆ ಇದ್ದರು ಸಹ ಈ ದಾವೆಗೆ ಸಹಾಯ ಮಾಡಲು ಸದರಿ ಹಕ್ಕು ಖುಲಾಸೆ ಪತ್ರ ಬರೆದಿದ್ದೇನೆಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರವನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಸಾಕ್ಷಿ

ಮುಂದುವರೆದು ತನ್ನ ಅಣ್ಣ ಹಾಜರುಪಡಿಸಿರಬಹುದು. ಹೆರೂರು ಗ್ರಾಮದ ಸರ್ವೆ ನಂ.43/2 ಎ 1 ಎರಡು ಗುಂಟೆ ಜಮೀನಿಗೆ ಖಾತೆ ನಂಬರ್ 182/191 ಮತ್ತು 182/191/1 ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ದಾವಾ ಆಸ್ತಿಗೆ ಮತ್ತು ಖಾತೆ ನಂಬರ್ 182/191 ಮತ್ತು 182/191/1 ಸಂಭಂದ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ಗುಂಟೆ ಅನುಭವದಲ್ಲಿ ಇರುವ ಜಮೀನು ದಾವಾ ಆಸ್ತಿಗೆ ಸಂಭಂದಿಸಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2 ಗುಂಟೆ ಜಮೀನಿಗೆ ಖಾತೆ ಆಗಿದೆ. ಖಾತೆ ಮಾಡುವುದಕ್ಕೆ ಮೇಲಾಧಿಕಾರಿಯವರು ಆದೇಶ ಪತ್ರ ಮಾಡಿರುತ್ತಾರೆಂದರೆ ಸರಿ. ಸದರಿ ಆದೇಶವನ್ನು ನಾನು ಹಾಜರುಪಡಿಸಿಲ್ಲ. ನನ್ನ ಅಣ್ಣ ಸದರಿ ಆದೇಶವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. 2 ಗುಂಟೆಯ ಸಂಪೂರ್ಣ ವಿಸ್ತೀರ್ಣ ನನಗೆ ಗೊತ್ತಿಲ್ಲ. 2 ಗುಂಟೆಯ ಒಟ್ಟು ವಿಸ್ತೀರ್ಣ 3120 ಚದರ ಅಡಿ ಎಂದರೆ ನನಗೆ ಗೊತ್ತಿಲ್ಲ. ಶೌಚಾಲಯ ಸಾಲ, ಬಚ್ಚಲು ಮನೆ ಕೊಟ್ಟಿರುವ ಕಾರಣ 2 ಗುಂಟೆ ಆಸ್ತಿಗೆ ಖಾತೆ ಆಗಿದೆ ಎಂದು ಹೇಳುತ್ತಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 2440 ಚದರ ಅಡಿ ಎಂದು ಬರೆಸಿದ್ದೇನೆಂದರೆ ನನ್ನ ಅಣ್ಣ ಬರೆಸಿರಬಹುದು. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಚಂದ್ರಯ್ಯ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣಕ್ಕೆ ಮಂಗಳಮ್ಮ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರಕ್ಕೆ ರಸ್ತೆ. ದಾವಾ ಆಸ್ತಿಯ ಚಕ್ಕುಬಂದಿಯಲ್ಲಿ ಯಾರು ಅನುಭವದಲ್ಲಿ ಇದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ನೊಂದಣಿ ಸಂಖ್ಯೆ 1601/1988-89 ನಿರ್ವಹಾಣ ಜಾರಿ ದಿನಾಂಕಃ 09.07.1978 ರಂದು ಮೊಹಮ್ಮದ್ ಅಯಾದ್ ಸಾಹೇಬ್ ರವರಿಗೆ 2 ಗುಂಟೆ ಖಾತೆ ಆಗಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ ಅದರ ಬಗ್ಗೆ ನನಗೆ ಗೊತ್ತಿಲ್ಲ. 2 ಗುಂಟೆ ಜಮೀನನ್ನು ಖರೀದಿ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ನನಗೆ ಸಮಸ್ಯೆ ಇಲ್ಲ. ಸದರಿ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗೆ ಹೆರೂರು ಗ್ರಾಮ ಪಂಚಾಯ್ತಿಯಿಂದ ದಾಖಲೆಗಳನ್ನು ಹಾಜರುಪಡಿಸಿದ್ದೇವೆ. ಯಾವ ಇಸ್ವಿಯಲ್ಲಿ ಸದರಿ ದಾಖಲೆಗಳನ್ನು ಮಾಡಿಸಿದ್ದೇವೆ ಎಂದು ನನಗೆ ಗೊತ್ತಿಲ್ಲ. 1601/1988-89 ಪ್ರಕಾರ ಜಿ.ಯು ಮೊಹಮ್ಮದ್ ಅಯಾಸಾಬ್ ರವರಿಂದ ರೂ.100/- ಗೆ ಕ್ರಯಕ್ಕೆ ಪಡೆದಿದ್ದೇವೆ ಎಂದರೆ ರೂ.90/- ಗೆ ಕ್ರಯಕ್ಕೆ ಪಡೆದಿದ್ದೇವೆ. ಕ್ರಯಪತ್ರವನ್ನು ಹಾಜರುಪಡಿಸಿಲ್ಲ, ಅದು ಕಳೆದು

ಹೋಗಿದೆ. ದಾವಾ ಆಸ್ತಿಗೆ ಬರುವಾಗ ಕಪ್ಪ ಹಂಚು ಇತ್ತು. 2 ಗುಂಟೆ ಆಸ್ತಿಯಲ್ಲಿ ಮುಂದೆ ಮನೆ ಇತ್ತು, ಹಿಂಬದಿ ಖಾಲಿ ನಿವೇಶನ, ಪಕ್ಕದಲ್ಲಿ ಕೊಟ್ಟಿಗೆ ಮನೆ ಮತ್ತು ತೆಂಗಿನ ಮರಗಳು ಇದ್ದವು. ಯಾವ ಇಸ್ವಿಯಲ್ಲಿ ಸದರಿ ಮನೆಗೆ ವಾಸಕ್ಕೆ ಬಂದೆವು ಎಂದರೆ ನನಗೆ ಗೊತ್ತಿಲ್ಲ. ನಾವು ಪ್ರತಿವಾದಿಗಳ ಮನೆಗೆ ಬಾಡಿಗೆದಾರರಾಗಿ ಬಂದಿದ್ದೇವು ಎಂದರೆ ಸರಿಯಲ್ಲ. ನಾವು ಬಾಡಿಗೆ ಕೊಡುತ್ತಿಲ್ಲ. ಬಾಡಿಗೆದಾರರೆಂದು ನನ್ನ ಪೂರ್ವಜರಿಗೆ ಗೊತ್ತಿದೆ ಮತ್ತು ನನಗೆ ಗೊತ್ತಿಲ್ಲ ಎಂದರೆ ನಾನು ಹುಟ್ಟಿರಲಿಲ್ಲ ಮತ್ತು ನನಗೆ ಗೊತ್ತಿಲ್ಲ.

ದಾವಾ ಆಸ್ತಿಗೆ ಸಂಭಂದಿಸಿದ ದಾಖಲೆಗಳನ್ನು ಮಾಡಿಕೊಳ್ಳಲು ಸಂಭಂದಿಸಿದ ಅಧಿಕಾರಿಗಳ ಮುಂದೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ, ಖಾತೆ ಮಾಡಿಕೊಳ್ಳಲು ಯಾವುದೇ ಪ್ರಕರಣ ಸಲ್ಲಿಸಿಲ್ಲ ಎಂದರೆ ಕೈ ಬರವಣಿಗೆಯಲ್ಲಿ ಮಂಡಲ್ ಪಂಚಾಯ್ತಿಯವರು ಬರೆದು ಕೊಟ್ಟಿದ್ದರು. ಪಹಣಿ ಪಡೆಯುವುದಕ್ಕೆ ತಹಶೀಲ್ದಾರ್ ರವರ ಮುಂದೆ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ. 2 ಗುಂಟೆ ಜಮೀನಿಗೆ ಇಲ್ಲಿಯವರೆಗೂ ನಕ್ಷೆ ಆಗಿಲ್ಲ ಎಂದರೆ ಸರಿ. ಮೊಹಮ್ಮದ್ ಸಾಬ್ ರವರಿಂದ ಪಡೆದಿರುವ ಮೂಲ ಮಾಲೀಕರಿಗೆ ಮತ್ತು ದಾಖಲೆಗಳಿಗೆ ತಾಳೆ ಇಲ್ಲ ಎಂದರೆ ಸರಿಯಲ್ಲ. ನಾವು ಅನುಬವದಲ್ಲಿ ಇರುವ ಆಸ್ತಿಗೆ ಮತ್ತು ದಾವಾ ಆಸ್ತಿಗೂ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ. ನೊಂದಣಿ ಸಂಖ್ಯೆ 7421/1976-77 ರ ಕ್ರಯಪತ್ರದಲ್ಲಿ ತೋರಿಸಿರುವ ಅಯಾತ್ ಸಾಬ್ ರವರ ಚಕ್ಕುಬಂದಿ ದಕ್ಷಿಣಕ್ಕೆ ಉಳುಮೆ ಉಳಿಕೆ ಜಮೀನು ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿ ಕ್ರಯಪತ್ರದಲ್ಲಿ ತೋರಿಸಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯು ವ್ಯವಸಾಯದ ಜಮೀನು.

ಭದ್ರಯ್ಯ ಬಿನ್ ಮುನಿಯಪ್ಪ ನನ್ನ ಅಣ್ಣ. ಭದ್ರಯ್ಯ ಬಿನ್ ಮುನಿಯಪ್ಪ ರವರ ಹೆಸರಿನಲ್ಲಿ ಹೆರೂರು ಗ್ರಾಮದಲ್ಲಿ ಸರ್ವೆ ನಂ.66 ರಲ್ಲಿ 22 ಗುಂಟೆ ಜಮೀನು ಇದೆ ಎಂದರೆ 34 ಗುಂಟೆ ಜಮೀನು ಇದೆ. ಸರ್ವೆ ನಂ.66 ರಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ನಾವು 29X19=551 ಚದರ ಅಡಿ ಮನೆಗೆ ಮಾತ್ರ ಕಂದಾಯ ಕಟ್ಟುತ್ತಿದ್ದೇವೆ ಎಂದರೆ ನನ್ನ ಅಣ್ಣನಿಗೆ ಗೊತ್ತಿದೆ. ದಾವಾ ಆಸ್ತಿಗೆ ಈಗ ಎರಡು ಖಾತೆ ಆಗಿದೆ ಎಂದರೆ ಸರಿ. ಭದ್ರಮ್ಮನವರು ಬಾಡಿಗೆದಾರರಾಗಿ ಅನುಭವದಲ್ಲಿ ಇದ್ದು ಮಾಲೀಕರಾಗಿ ಅಲ್ಲ ಎಂದರೆ ಸರಿಯಲ್ಲ. ಹನುಮಕ್ಕನವರ ತಂದೆ ತಾಯಿಯ ಹೆಸರು ಚಿಕ್ಕನರಸಯ್ಯ ಮತ್ತು ಭದ್ರಮ್ಮ ಅಲ್ಲ ಎಂದರೆ ಸರಿಯಲ್ಲ ಮತ್ತು ನಾವು ಸುಳ್ಳು ವಂಶವೃಕ್ಷ ಬರೆಸಿದ್ದೇವೆ ಎಂದರೆ ಸರಿಯಲ್ಲ. ಮೊಹಮ್ಮದ್ ಅಯಾತ್ ಸಾಬ್ ನವರಿಂದ 2 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

2 ಗುಂಟೆ ಜಮೀನನ್ನು ರೂ.100/- ಕ್ಕೆ ಪಡೆಯಲು ಸಾಧ್ಯವಿಲ್ಲ ಎಂದರೆ ಖರೀದಿ ಮಾಡಿದ ಕಾಲದಲ್ಲಿ ಮೊತ್ತ ಕಡಿಮೆ ಇತ್ತು. ಅವತ್ತಿಗೂ ಸಹ ಜಮೀನಿನ ಬೆಲೆ ಜಾಸ್ತಿ ಇದ್ದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯ ಋಣಭಾರ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ವಾದಿಗಳು ಹಾಜರುಪಡಿಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ. ನಾನು ವಕೀಲರು ಅಥವಾ ಪತ್ರ ಬರಹಗಾರರ ಮೂಲಕ ಸದರಿ ದಾಖಲೆಯನ್ನು ಹಾಜರುಪಡಿಸಬಹುದಿತ್ತು ಎಂದರೆ ಅದರ ಮಾಹಿತಿ ಇರುವುದಿಲ್ಲ. ಆದರೆ ಹಾಜರುಪಡಿಸಬಲ್ಲೇನು. ಕ್ರಯಪತ್ರದಲ್ಲಿ ದಾವಾ ಆಸ್ತಿಯ ಪಶ್ಚಿಮಕ್ಕೆ ಚಿಕ್ಕನರಸಯ್ಯ ಎಂದರೆ ನನ್ನ ತಾತ. ಅವರು ನನ್ನ ತಾತ ಅಲ್ಲ ಎಂದರೆ ಸರಿಯಲ್ಲ. ಅವರು ನನ್ನ ತಾತ ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಮೊಹಮ್ಮದ್ ಹಯಾತ್ ರವರ ಮಗ ಮಲಿಕ್ ಅಹಮ್ಮದ್ ಜೀವಂತ ಇದ್ದಾರೆ. ಸದರಿ ಮಲಿಕ್ ಅಹಮ್ಮದ್ ರವರ ಸಾಕ್ಷಿಯನ್ನು ನ್ಯಾಯಾಲಯದಲ್ಲಿ ಹೇಳಿಸುತ್ತೇವೆ. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಚಿಕ್ಕನರಸಯ್ಯ ನಾಗಸಂದ್ರದವರು ಎಂದರೆ ನನಗೆ ಗೊತ್ತಿಲ್ಲ. ಸದರಿ ಚಿಕ್ಕನರಸಯ್ಯನವರ ಮೊಹಮ್ಮದ್ ಹಯಾತ್ ರವರ ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಂದಾಯ ಇಲಾಖೆಯಲ್ಲಿ ಈಗಲೂ ಸಹ ಪ್ರತಿವಾದಿಗಳ ಹೆಸರಿಗೆ ದಾಖಲೆಗಳು ಬರುತ್ತಿವೆ ಎಂದರೆ ಅವರು ಮಾಡಿಸಿಕೊಂಡಿದ್ದಾರೆ. ಖಾತೆ ಪಹಣಿ ಪ್ರತಿವಾದಿಗಳ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನೇ ಹೇಳಿ ಬರೆಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ಬರೆದಿದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi